ಗಮನಕ್ಕೆ ತಂದಿದ್ದೇನೆ. ಆದರೂ ಸಂಬಂಧಪಟ್ಟ ಇಲಾಖೆಯವರು ಸುಮಾರು ೪ ವರ್ಷಗಳಿಂದಲೂ ಇದರ ಬಗ್ಗೆ ಯಾವುದೇ ಕ್ರಮವನ್ನೂ ತೆಗೆದುಕೊಳ್ಳದೆ ಸುಮ್ಮನಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದನ್ನು ದಯವಿಟ್ಟು ಹೇಳಬೇಕು.

ಇನ್ನು ಚಿಕ್ಕಮಗಳೂರಿನಲ್ಲಿ ಹಾಲಿನ ಡೈರಿಯನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೀರಿ, ಶಿವಮೊಗ್ಗದಲ್ಲಿ ಏನು ಡೈರಿ ಇದೆ ಅಲ್ಲೇ ಸಾಕಷ್ಟು ಹಾಲು ಬರುತ್ತಿದೆ. ಆದ್ದರಿಂದ ಮತ್ತೆ ಚಿಕ್ಕಮಗಳೂರಿನ ಡೈರಿ ಅವಶ್ಯಕತೆ ಇಲ್ಲವೆಂದು ತಿಳಿದುಕೊಂಡು ಹೇಳಿರಬಹುದು. ಕೊಪ್ಪ, ಶೃಂಗೇರಿಯಿಂದ ಹೋಗತಕ್ಕ ಹಾಲನ್ನು ಸುಮಾರು ೮ ತಿಂಗಳಿಂದ ನಿಲ್ಲಿಸಿದ್ದಾರೆ. ಅಲ್ಲಿ ೭೮ ಹಾಲು ಉತ್ಪಾದಕರ ಕೋ ಆಪರೇಟಿವ್ ಸೊಸೈಟಿಗಳು ಪ್ರಾರಂಭವಾಗಿ ಮಿಲ್ಕ್ ರೂಟ್ ಪ್ರಾರಂಭವಾಗಿ ವ್ಯಾಪಾರವನ್ನು ನಡೆಸುತ್ತಿದ್ದರು. ಈಗ ಸುಮಾರು ತಿಂಗಳುಗಳಿಂದ ವ್ಯಾಪಾರ ಬರದೇ ಇರುವುದರಿಂದ ಐ.ಆರ್.ಡಿ.ಪಿ. ಯೋಜನೆಯ ಅಡಿಯಲ್ಲಿ ಸಾಲವನ್ನು ತೆಗೆದುಕೊಂಡಿರುವವರು ಯಾರಿದ್ದಾರೆ ಅವರೆಲ್ಲರಿಗೂ ಬಹಳ ತೊಂದರೆಯಾಗಿದೆ. ವ್ಯವಸಾಯಗಾರರಿಗೆ ತೊಂದರೆಯಾಗಿದೆ.

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಜುಲೈ ತಿಂಗಳ ಕೊನೆಯಲ್ಲಿ ಈ ೧೫ ಸೊಸೈಟಿಗಳು ಆರ್ಗನೈಸ್ ಆದಮೇಲೆ ಬಾಳೆಹೊನ್ನೂರಿನ ಶೀತಲೀಕರಣ ಯಂತ್ರವು ಜೆನ್ನಾಗಿ ಕೆಲಸ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ,

ಇನ್ನು ಎರಡನೆಯದಾಗಿ ಶಿವಮೊಗ್ಗಾ ಹತ್ತಿರವಿದೆಯೋ ಅಥವಾ ಹಾಸನ ಹತ್ತಿರವಿದೆಯೋ ಎಂಬುದನ್ನು ನೋಡಿ ಯಾವುದನ್ನು ಮಾಡುವುದಕ್ಕೆ ಸಾಧ್ಯವಿದೆ ಅದನ್ನು ಪರಿಶೀಲಿಸುತ್ತೇನೆ. The whole matter will be examined. and if it found feasible we will certainly agree to the suggestion of the hon. Member.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಬಾಳೆಹೊನ್ನೂರಿನಲ್ಲಿ ೧೫ ಕೋ ಆಪರೇಟಿವ್ ಸೊಸೈಟಿಗಳಾದರೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದೀರಿ. ಆದರೆ ಈ ೧೫ ಕೋ ಆಪರೇಟಿವ್ ಸೊಸೈಟಿಗಳನ್ನು ಆರ್ಗನೈಸ್ ಮಾಡತಕ್ಕ ಜವಾಬ್ದಾರಿ ಯಾರ ಮೇಲಿದೆ ಎಂಬುದನ್ನು ತಿಳಿಸಬೇಕು. ಇವನ್ನು ಮಾಡಬೇಕಾದವರು ಯಾರು?

ಶ್ರೀ ಮಹಮ್ಮದ್ ಮೊಯಿನುದ್ದೀನ್.—ಕರ್ನಾಟಕ ಮಿಲ್ಕ್ ಫೆಡರೇಷನ್ ಮತ್ತು ಹಾಸನ ಜಿಲ್ಲಾ ಮಿಲ್ಕ್ ಪ್ರೊಡ್ಯೂಸರ್ಸ್ ಕೋ ಆಪರೇಟಿವ್ ಸೊಸೈಟೀಸ್‌ನ ಯೂನಿಯನ್‌ನವರೂ ಸೇರಿ ಮಾಡಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಇನ್ನು ೧೫ ದಿವಸದೊಳಗೆ ಇದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಮಹಮ್ಮದ್ ಮೊಯಿನುದ್ದೀನ್.—೧೫ ದಿವಸದೊಳಗೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಮಾಡಿಸುವುದಕ್ಕೆ ಸೊಸೈಟಿಯಿಂದ ಆದೇಶವನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

Public Undertakings in the State.

2616. SRI MALLIKARJUNA M. KHARGE (Gurumittakal).— Will the Minister for Industries and power be pleased to State,

a) The total number of public Undertaking (with names) in the State (Details may be furnished)?

b) The Total loss incurred by each Public Undertaking during the years 1985–86, 1986–87 to 1987–88 (Year wise information be furnished)?

SRI J. H. PATEL (Minister for Industries and power).—

a) There are 58 State-owned public Undertakings in the State. The names of the public Undertakings are given in Annexure-1, Column-1.

b) The losses incurred by the losing public Sector Undertakings during the year 1985-86 & 1986-87 are given in column 2 &3 of Annexure-1 (also Published in Bureau's 7th Annual Report presented to the Legislature in the present session). The data regarding 1987-88 is not ready as yet since P.S.Es have time up to Sept 88 to finalise their annual accounts.

ANNEXURE-I

Profit/Loss for all the Enterprises for the past Two years

Sl No.	Name of the Enterprise	1985-86	1986-78
	DEVELOPMENT ENTERPRISES SECTORAL DEVELOPMENT ENTERPRISES		
1	Kar Cashew Dev. Corpn.		
2	Kar Compost Dev Corpn	-10.62	-10.37
3	Kar Film Ind Dev Corpn	4.49	7.16
4	Kar Fisheries Dev Corpn		
5	Kar Forest Pl Corpn		
6	Kar Handloom Dev Corpn	-6.39	-120.20
7	LIDKAR	-32.87	-21.26
8	KEONICS	-34.60	-23.89
9	Kar ST Handicrafts	-3.88	
10	KSIIDC		
11	KSSIDC		
12	KSTDC		
13	Kar St Coir Dev Corpn	-2.41	-6.50
14	Kar Inland Fisheries Dev Corpn	-6.70	-13.81
15	Jungle Lodges & Resorts	-10.54	-4.45
	WEAKER SECTION DEVELOPMENT ENTERPRISES		
16	Kar SC & ST Dev Corpn	-13.41	
17	Kar BC & Minorities	-5.14	-4.76

	SERVICE ENTERPRISES		
18	Kar Agro Ind Corpn		
19	Kar Land Army Corpn		
20	Kar St Construction		
21	Kar Forest Ind Corpn		
22	Kar State Police Housing Corpn	-4.81	
23	Kar St seeds Corpn		
24	Sri Kanteerava Studious	-2,87	
25	Karnataka Truck Terminals		-2.15
	MARKETING ENTERPRISES		
26	Kar. Food & Civil Supplies		
27	MSIL		
28	Kar. Silk MKtg. Board		-20 52
29	Mktg Consu & Agencies		
	PRODUCTION ENTERPRISES		
30	BAFCO		
31	Chamundi M/C Tools	1.62	
32	KIMCO	-140.83	-121,50
33	Kar. Silk Ind Corpn.	-340.42	-415.96
34	Kar. Soaps & Detergents	-698.62	-731.16
35	Kar. Agro Corn Products		
36	KAVIKA	356.00	-.12
37	Mysore Chrome Tanning	171.55	-66.85
38	Mysore Cosmetics	17.54	-7.33
39	MEI		-161.98
40	Mysore Lac & Paints		-9.14
41	Mysore Minerals		
42	Mysore Paper Mills	-18.74	
43	Mysore Sugar Co.		
44	Mysore Tobacco Co.	-44.22	48.31
45	NGEF		
46	Hutti Gold Mines Company		
47	VISL	-3240 79	-2585.66
48	KPC		
49	Mysore Math Co.		
50	Kar. St. Veneers		
51	Karnataka Telecom Ltd		-.45

	ORGANISATIONS FORMED UNDER SPECIAL STATUT		
52	KSFC		
53	KSRTC	-1413.51	-797.71
54	Kar. St. Warehousing		
55	KEB	-2637.00	-7483.00
	DEEMED GOVERNMENT COMPANIES		
56	Mysore Acetate & Chem		
57	Kar, Agro Proteins	-89.99	-77.05
58	Mysore Lamp Works		

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿದ ಪ್ರಶ್ನೆಗೆ ಸುಮಾರು ೫೮ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಇವೆಯೆಂದು ಮಾನ್ಯ ಸಚಿವರು ಉತ್ತರ ಹೇಳಿದ್ದಾರೆ. ಇದರಲ್ಲಿ ಟೋಟಲ್ ಲಾಸ್ ಎಷ್ಟು ಎಂಬುದನ್ನು ತಮ್ಮ ಉತ್ತರದ ಅನೆಕ್ಚರ್ ೧ರಲ್ಲಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ಕೇಳಿದಾಗ ಬಿಡಿಸಿ ಬಿಡಿಸಿ, ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿ ನಾನಾದರೂ ಕೇಳುವುದಿಷ್ಟೆ. ಈ ೫೮ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಎಷ್ಟು ಪ್ರಾಫಿಟ್‌ನಲ್ಲಿವೆ. ಇದುವರೆಗೆ ಒಟ್ಟಾರೆ ಅಕ್ಯುಮುಲೇಟೆಡ್ ಲಾಸ್ ಎಷ್ಟು ಮತ್ತು ಉಳಿದ ಇಂಡಸ್ಟ್ರೀಸ್‌ನ ಅಕ್ಯುಮುಲೇಟೆಡ್ ಲಾಸ್ ಎಷ್ಟು ಎಂಬುದನ್ನು ಹೇಳಬೇಕು.

ಇನ್ನು ಎರಡನೆಯದಾಗಿ ತಾವು ಕೊಟ್ಟಿರತಕ್ಕ ಅಂಕಿಸಂಖ್ಯೆಗಳು ಅಂದರೆ ಲಾಸ್ ಎಂದು ಏನು ಫಿಗರ್ಸ್ ಕೊಟ್ಟಿದ್ದೀರಿ ಇದು ಫೈನಲ್ ರಿಪೋರ್ಟೇ ಅಥವಾ ಅಪ್ರಾಕ್ಸಿಮೇಟೇ ಎಂಬುದನ್ನು ದಯವಿಟ್ಟು ಹೇಳಬೇಕು.

ಇನ್ನು ಮೂರನೆಯದಾಗಿ ಇಷ್ಟೊಂದು ಲಾಸ್ ಆಗುವುದಕ್ಕೆ ಮುಖ್ಯ ಕಾರಣ ಏನು ? ಈಗ ಏನಾಗಿದೆ ಎಂದರೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಎಂದರೆ ಸಾಮಾನ್ಯ ಜನರು ಹೆದರುವಂತಾಗಿದೆ. ಸರ್ಕಾರ ಯಾವುದೇ ಇಂಡಸ್ಟ್ರೀಸ್‌ಗೆ ಕೈ ಹಾಕಿದರೂ ಲುಕ್ಸಾನಾಗುತ್ತದೆ ಎನ್ನುವ ಭಾವನೆ ಉಂಟಾಗಿದೆ. ಇದು ನ್ಯಾಷನಲೈಸ್ ವಿರುದ್ಧ ಪಾಲಿಸಿಯಾಗುತ್ತದೆಂದು ಜನರು ಆಪಾದನೆ ಮಾಡುವುದು ಬರುತ್ತದೆ. ದಯವಿಟ್ಟು ಈ ಮೂರು ವಿಷಯಗಳ ಬಗ್ಗೆಯೂ ಪ್ರಸ್ತಾಪ ಮಾಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ನಾವು ಕೊಟ್ಟಿರತಕ್ಕಂಥ ಅಂಕಿಅಂಶಗಳು ಫೈನಲ್ ಅಲ್ಲ. ಡಿಪಾರ್ಟ್‌ಮೆಂಟ್ ಕೊಟ್ಟಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಾಸ್ ಅಂಡ್ ಪ್ರಾಫಿಟ್ ಅಕೌಂಟ್ ಎಂದು ಪ್ರತಿವರ್ಷ ತಯಾರು ಮಾಡಿಕೊಡುವುದು ಯಾವುದು ?

ಶ್ರೀ ಜೆ.ಎಚ್. ಪಟೇಲ್.—ಮೊದಲು ಡಿಪಾರ್ಟ್‌ಮೆಂಟಲ್ ಆಡಿಟ್ ಅಂದರೆ ಇಂಟರ್‌ನಲ್ ಆಡಿಟ್ ಆಗಬೇಕು. ಆಮೇಲೆ ಆಡಿಟ್ ಜನರಲ್‌ಗೆ ಹೋಗಬೇಕು. ಇದರಿಂದ ೩-೪ ತಿಂಗಳಾಗುತ್ತದೆ. ಇದನ್ನು ಸರಿಪಡಿಸುವುದಕ್ಕೆ ಕೆ.ಎಸ್.ಬಿ.ಪಿ.ಇ. ಅವರು ಮಾನಿಟರ್ ಮಾಡುತ್ತಾರೆ. ಮಾನಿಟರಿ ಮಾಡಿ ಆಫ್ ಟು ಡೇಟ್ ಅಕೌಂಟ್ಸ್ ನೀಡುತ್ತಾರೆ. ಸನ್ಮಾನ್ಯ ಅಧ್ಯಕ್ಷರೇ ಪಿ.ಯು.ಸಿ ಎಂದರೆ ಸರ್ಕಾರಿ ಸ್ವಾಮ್ಯದಲ್ಲಿರತಕ್ಕಂಥ ಕಾರ್ಪೊರೇಷನ್‌ಗಳು ಮತ್ತು ಬೇರೆ ಬೇರೆ ಜಾಯಿಂಟ್ ಸೆಕ್ಟಾರಿನಲ್ಲಿರತಕ್ಕಂಥವು ಬರುತ್ತದೆ. ವಿ.ಐ.ಎಸ್.ಎಲ್. ಸರ್ಕಾರಿ ಕಾರ್ಖಾನೆ. ಆದರೆ ಇಂಡಸ್ಟ್ರೀಸ್ ಕಾರ್ಪೊರೇಷನ್, ಮಂಗಳೂರು ಫರ್ಟಿಲೈಸರ್ಸ್ ಇವೆಲ್ಲ ಜಂಟಿ ವಲಯದಲ್ಲಿ ಬರತಕ್ಕಂಥವುಗಳಾಗಿವೆ. ಸರ್ಕಾರಿ ವಲಯ

ದಲ್ಲಿದ್ದು ಲಾಭ ಮಾಡುತ್ತಿರತಕ್ಕಂಥವುಗಳೆಂದರೆ ಎನ್.ಜಿ.ಇ.ಎಫ್. ಮಂಗಳೂರು ಗೊಬ್ಬರದ ಕಾರ್ಖಾನೆ. ಇವುಗಳನ್ನು ಇದರಲ್ಲಿ ಕೊಡುವುದಕ್ಕಾಗುವುದಿಲ್ಲ. ಲಾಭ ಮಾಡುತ್ತಿರುವುದನ್ನು ಇದರಲ್ಲಿ ಸೇರಿಸುವುದಕ್ಕಾಗುವುದಿಲ್ಲ. ತಪ್ಪಾಗಿ ಗೊತ್ತಿದೆ ಕ್ಯಾಷ್ಯೂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಈ ವರ್ಷ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ, ಮಾಡುತ್ತೇವೆ ಬೇರೆ ಏನೂ ಆಗಿಲ್ಲ. ಹಾಗೆಯೇ ಬೇಕಾದಷ್ಟು ಲಿಡ್ಕರ್, ಕಿಯೋನಿಕ್ಸ್, ಕಾಯರ್ ಬೋರ್ಡ್. ಆಗ್ರೋ ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಲಾಭ ಮಾಡತಕ್ಕಂಥದ್ದು ಇವೆ, ಇನ್ನು ಕೆಲವು ಲುಕ್ಸಾನಿನಲ್ಲಿ ನಡೆಯುತ್ತಲೂ ಇವೆ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಟೋಟಲ್ ಲಾಭ ಎಷ್ಟಾಗಿದೆ, ಮತ್ತು ಟೋಟಲ್ ಲುಕ್ಸಾನು ಎಷ್ಟಾಗಿದೆ ಅದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಜೆ.ಎಚ್. ಪಟೇಲ್.—೧೯೬೬-೬೭ರಲ್ಲಿ ೧೯.೬೬ ಲಕ್ಷ ಅಂದರೆ ಸುಮಾರು ೨೦ ಕೋಟ್ಯಿ ರೂಪಾಯಿಗಳಷ್ಟು ಲಾಭ ಮಾಡಿದ್ದಾರೆ. ೧೨೭ ಕೋಟಿ ರೂಪಾಯಿಗಳಷ್ಟು ಲುಕ್ಸಾನು ಮಾಡಿದ್ದಾರೆ ಪ್ರತಿಯೊಂದಕ್ಕೂ ಲಾಭ ಮಾಡಿರುವುದಕ್ಕೆ ಮತ್ತು ನಷ್ಟ ಮಾಡಿರುವುದಕ್ಕೆ ವಿವರಪಟ್ಟಿ ಬೇರೆ ಇದೆ' ಉದಾಹರಣೆಗೆ ಕ್ಯಾಷ್ಯೂ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನ್ನು ಇಂಪ್ರೂವ್ ಮಾಡಿರುತ್ತೇವೆ' ಅದರಿಂದ ಅದು ಪ್ರಾಫಿಟ್‌ನಲ್ಲಿ ಇದೆ. ಹಾಗೆಯೇ ಫಿಷರೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಪೂಡ್ ಅಂಡ್ ಸಿವಿಲ್ ಸಪ್ಲೈಸ್, ಮೈಸೂರು ಪೇಪರ್ ಮಿಲ್ಸ್, ಹಟ್ಟಿ ಗೋಲ್ಡ್ ಮೈನ್ಸ್ ಇವೆಲ್ಲಾ ಪ್ರಾಫಿಟ್‌ನಲ್ಲಿದೆ ಹಾಗೆಯೇ ಕೆ.ಎಸ್.ಎಫ್.ಸಿ ಮತ್ತು ಕೆ.ಎಸ್.ಐ.ಡಿ.ಸಿ ಯೂ ಕೂಡ ಪ್ರಾಫಿಟ್ ಮಾಡಿರತಕ್ಕಂಥದ್ದು ಇದೆ. ೧೦-೨೦ ಕೋಟಿ ರೂಪಾಯಿಗಳನ್ನು ಪ್ರಾಫಿಟ್ ಮಾಡಿದ್ದಾರೆ. ಕೊನೆಗೆ ವಿ.ಐ.ಎಸ್.ಎಲ್. ಇದರಲ್ಲಿ ಅಕ್ಯುಮಿಲೇಟ್ ಲಾಸ್ ಆಗಿರುವುದು ಒಂದು ಮೆಯಿನ್ ಬರ್ಡನ್.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದನ್ನು ಇಂಪ್ರೂವ್ ಮಾಡುವುದಕ್ಕೆ ಏನು ಮಾಡಿದ್ದೀರಿ?

ಶ್ರೀ ಜೆ. ಎಚ್. ಪಟೇಲ್.—ಪ್ರತಿಯೊಂದು ಉದ್ಯಮದಲ್ಲಿಯೂ ನಾವು ಟೈಡಿಂಗ್ ಆರ್ಗನೈಸೇಷನ್ ಪ್ರಕಾರನಾಗಿ ನಡೆಸುವುದಕ್ಕಾಗುವುದಿಲ್ಲ. It does not produce anything. It has to do business. ಅಂಥದ್ದಕ್ಕೆ ನಾವು ಮಾರ್ಕೆಟಿಂಗ್ ಫೆಸಿಲಿಟೀಸ್, ಅಡ್ವರ್‌ಟೈಸಿಂಗ್ ಫೆಸಿಲಿಟೀಸ್, ಆತ್ಯಾಧುನಿಕ ಕಮ್ಯೂನಿಕೇಷನ್ಸ್ ಇದೆಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದೇವೆ.

ಇನ್ನು ಸಣ್ಣ ಸಣ್ಣ ಯಂತ್ರಗಳನ್ನು ತಯಾರಿಸತಕ್ಕ ಕಾರ್ಖಾನೆಗಳು ಲಾಸ್ ಆಗುವುದಕ್ಕೆ ಮುಖ್ಯ ಕಾರಣ ರಾ ಮೆಟೀರಿಯಲ್ಸ್ ಸಪ್ಲೈ ಮತ್ತು ಕೆಲವಕ್ಕೆ ಪವರ್ ಕಟ್ ಉದಾಹರಣೆಗೆ, ವಿ.ಐ.ಎಸ್.ಎಲ್. ಅದನ್ನು ಇಂಪ್ರೂವ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ಆ ನಾಶು ಬೇರೆ. ನಾವು ಯಾವುದಾದರೂ ನಿರ್ದಿಷ್ಟವಾದ ಕಾರ್ಖಾನೆಯನ್ನು ಕೇಳಿದರೆ ಹೇಳಬಹುದು. ಟೆಕ್ಸ್‌ಟೈಲ್ ಮಿಲ್‌ಗಳು ಕೋ-ಆಪರೇಟೀವ್ ಸೆಕ್ಟರ್‌ನಲ್ಲಿ ಲಾಸ್ ಆಗುತ್ತಿವೆ. ಅದೇ ಶುಗರ್ ಮಿಲ್‌ಗಳು ಸುಧಾರಣೆಯಾಗಿವೆ. ಸುಮಾರು ೬-೭ ಕಾರ್ಖಾನೆಗಳು ಸುಧಾರಣೆಯಾಗಿವೆ. ಮಾತ್ರ ಸದಸ್ಯರ ಸಲಹೆಯನ್ನು ಒಪ್ಪುತ್ತೇನೆ. ಸರ್ಕಾರೀ ಕಂಪನಿಗಳು ಸಾಲಕ್ಕೂಸ್ಕರ ಮಾಡುವುದು, ಖಾಸಗಿಯವರು ಹಾಗೆ ಮಾಡುವುದಿಲ್ಲವೆಂಬ ಅಭಿಪ್ರಾಯ ಏನಿದೆ ಇದು ರಾಜ್ಯದಲ್ಲಿಮಾತ್ರವಲ್ಲ ರಾಷ್ಟ್ರದಲ್ಲೂ ಇದೆ. ಸೆಂಟ್ರಲ್ ಸೆಕ್ಟಾರ್‌ನಿಂದ ಳಳ ಸಾವಿರ ಕೋಟಿ ರೂಪಾಯಿಗಳನ್ನು ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ಹಾಕಿ ೫೦ ಪರ್ಸೆಂಟ್ ಕೂಡ ಲಾಭ ಬರುತ್ತಿಲ್ಲ. ನಮ್ಮದು ಕೂಡ ೧,೬೦೦-೧,೭೦೦ ಕೋಟ ರೂಪಾಯಿ ಹಾಗೇ ಆಗಿದೆ. ಇದಕ್ಕೆ ಕಾರಣ ಮ್ಯಾನೇಜ್‌ಮೆಂಟ್ ಡಿಫಿಷಿಯನ್ಸಿ ಇರುತ್ತದೆ, ಮಾರ್ಕೆಟಿಂಗ್ ಟ್ರಬಲ್ ಇರುತ್ತದೆ. ರಾ ಮೆಟೀರಿಯಲ್ಸ್ ಸಪ್ಲೈಯಲ್ಲಿ ತೊಂದರೆ ಇರುತ್ತದೆ. ಕೇಂದ್ರ ಸರ್ಕಾರದಲ್ಲಿ ಕೂಡ ಎಕ್ಸ್‌ಪೋರ್ಟ್-ಇಂಪೋರ್ಟ್ ಪಾಲಿಸಿ ಸಮಸ್ಯೆ ಇರುತ್ತದೆ. ಪಬ್ಲಿಕ್ ಅಂಡರ್‌ಟೇಕಿಂಗ್ ಅಂದರೆ ಅಷ್ಟೇ ಎಂಬ ಭಾವನೆ ಏನಿದೆ ಇದನ್ನು ತೊಡೆಯಬೇಕಿಂಬುದನ್ನು ಒಪ್ಪುತ್ತೇನೆ. ಸಾರ್ವಜನಿಕರ ದುಡ್ಡಿನ ಬಗ್ಗೆ ಆಸಕ್ತಿ ಬರುವುದಕ್ಕೆ ಮ್ಯಾನೇಜೀರಿಯಲ್.....

ಶ್ರೀ ಕೆ. ಹೆಚ್. ಪಾಟೀಲ್—ಇವತ್ತಿನ ದಿವಸ ನಮ್ಮಲ್ಲಿ ವ್ಯವಸಾಯದಲ್ಲಿ ಏನಾಗಿದೆ ಹಾಗೇ ಇಲ್ಲಿ ಕೂಡ ಆಗಿದೆ. ಪಬ್ಲಿಕ್ ಅಂಡರ್‌ಟೇಕಿಂಗ್‌ನಲ್ಲಿ ಏನಾಗಿದೆ ಎಂದರೆ, ಸ್ಟಿಕ್ಟ್ ರೆಸ್ಪಾನ್ಸಿಬಿಲಿಟಿ ಗೊತ್ತು ಮಾಡಿ ಏನು ಅಧಿಕಾರಿಗಳನ್ನು ನೇಮಿಸುತ್ತೇವೆ ಅವರು ಏನೋ ಒಂದು ಮಾಡಿ ನಾಳೆ ಇನ್ನೊಂದು ಕತೆ

ಹೋಗುತ್ತಾರೆ. ನೇರವಾಗಿ ಇಷ್ಟು ಮಾಡಬೇಕೆಂದು ಕಡ್ಡಾಯ ಮಾಡಿ, ಆ ರೀತಿ ಕೆಲಸ ಮಾಡುವ ವರನ್ನು ನೇಮಿಸಬೇಕು. ಸುಮ್ಮನೆ ಯಾರನ್ನಾದರೂ ಹಾಕಿ ಕೆಲಸ ಮಾಡಿ ಎಂದರೆ ಆಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್. —ಮಾನ್ಯ ಸದಸ್ಯರ ಸಲಹೆಯನ್ನು ಆಗಲೇ ಒಪ್ಪಿದ್ದೇನೆ. ಅದಕ್ಕೆ ತಂತ್ರಜ್ಞಾನವನ್ನು ಹೆಚ್ಚು ಹೆಚ್ಚು ಇನ್‌ವಾಲ್ ಮಾಡಬೇಕು ಮತ್ತು ಎಲ್ಲಿ ಲುಕ್ಸಾನಾಗುತ್ತದೆ ಅಂಥ ಕಂಪನಿಗಳಲ್ಲಿ ಜವಾಬ್ದಾರಿ ಹೊತ್ತವರನ್ನೇ ಹೊಣೆಗಾರಿಕೆ ಮಾಡುವುದರಿಂದ ಸ್ಥಿತಿ ಉತ್ತಮವಾಗುತ್ತದೆ.

(ಶ್ರೀ ಖಿರ್ಗೆಯವರು ಪ್ರಶ್ನೆ ಕೇಳಲು ನಿಂತರು)

ಶ್ರೀ ಎ. ಲಕ್ಷ್ಮೀಸಾಗರ್.—ಇದು ಪ್ರಶ್ನೋತ್ತರ ಕಾಲ ಈಗಾಗಲೇ ಈ ಪ್ರಶ್ನೆಗೆ ೨೦ ನಿಮಿಷ ಗಳನ್ನು ತೆಗೆದುಕೊಳ್ಳಲಾಗಿದೆ. ಇದರ ಮೇಲೆ ಚರ್ಚೆ ಮಾಡಬೇಕು, ವಿಷಯ ವಿಮರ್ಶೆ ಮಾಡಬೇಕು, ಎಲ್ಲೆಲ್ಲಿ ತೊಂದರೆ ಇದೆ, ನ್ಯೂನತೆ ಇದೆ ಅದರ ಬಗ್ಗೆ ವಿಮರ್ಶೆ ಆಗಬೇಕು ಎಂಬುದಕ್ಕೆ ನನ್ನ ಅಭ್ಯಂತರ ವಿಲ್ಲ. ಬೇಕಾದರೆ ಎರಡೂವರೆ ಗಂಟೆ ಚರ್ಚೆ ಇಡಲಿ, ಮಂತ್ರಿಗಳು ಉತ್ತರಿಸುತ್ತಾರೆ. ಆದರೆ ಪ್ರಶ್ನೋತ್ತರ ಸಮಯದಲ್ಲಿ ಈ ರೀತಿ ವಿಪುಲ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ಅವಕಾಶ ಇಲ್ಲ. ಇದು ನನ್ನ ಕ್ರಿಯಾಲೋಪ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ.—ಕ್ಲಾರಿಫಿಕೇಶನ್ ಕೇಳುತ್ತಿರುವಾಗ ಕ್ರಿಯಾಲೋಪ ಏನು ಬಂತು ? ಪದೇಪದೇ ನಾನೇನು ಕೇಳಲಿಲ್ಲ.

ಉಪಾಧ್ಯಕ್ಷರು.—ಬಹಳಷ್ಟು ಸಮಯ ತೆಗೆದುಕೊಳ್ಳುವುದು ಬೇಡ, ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖಿರ್ಗೆ. —ನಾನು ಕೇಳಿದ್ದು ಒಂದೇ ಒಂದು ಪ್ರಶ್ನೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರು ಅನೇಕ ಇಂಡಸ್ಟ್ರಿಗಳ ಮೇಲೆ ಅನೇಕ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ.ಅದು ವಿಐಎಸ್‌ಎಲ್ ಇರಬಹುದು, ಸೋಪ್‌ಫ್ಯಾಕ್ಟರಿ ಇರಬಹುದು. ಹೀಗೆ ಒಂದೊಂದು ಇಂಡಸ್ಟ್ರಿ ಮೇಲೆ ಪಿಯುಸಿ ಯವರು ವಿಚಾರ ಮಾಡಿ ಸಲಹೆ ಕೊಟ್ಟಿದ್ದಾರೆ. ಅವರು ಕೊಟ್ಟಿರತಕ್ಕ ಸಲಹೆಗಳನ್ನು ಸರ್ಕಾರದವರು ಇಂಪ್ಲಿಮೆಂಟ್ ಮಾಡಿದ್ದಾರೆಯೆ ? ವೀರಯ್ಯಸ್ವಾಮಿಯವರು ಕರ್ನಾಟಕ ಸಾಬೂನು ಮತ್ತು ಡಿಟರ್ಜಂಟ್ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಪ್ರಶ್ನೆ ಹಾಕಿ, ಆ ಉದ್ದಿಮೆಯಲ್ಲಿ ಆದ ಲಾಭ ಮತ್ತು ನಷ್ಟ ಎಷ್ಟು ಎಂದು ಕೇಳಿದ್ದರು. ಅದಕ್ಕೆ ಉತ್ತರವಾಗಿ ೧೯೮೬-೮೭ರಲ್ಲಿ ೬೫೫.೭೦ ಲಕ್ಷ ರೂಪಾಯಿ ನಷ್ಟ ಎಂದು ಹೇಳಿದ್ದೀರಿ. ನನಗೆ ಉತ್ತರಿಸಿದ್ದರಲ್ಲಿ ೭೩೧.೧೬ ಲಕ್ಷ ಎಂದು ಹೇಳಿದ್ದೀರಿ. ಅಂದರೆ ಏನಾಯಿತು ? ಇಲ್ಲಿ ೮೦ ಲಕ್ಷ ರೂಪಾಯಿ ವ್ಯತ್ಯಾಸ ಬರುತ್ತಿದೆ. ನೀವು ಕೊಟ್ಟಿದ್ದು ಲಕ್ಷದಲ್ಲಿದೆಯೋ, ಸಾವಿರದಲ್ಲಿದೆಯೋ ಗೊತ್ತಿಲ್ಲ. ಸಾವಿರ ಲಕ್ಷೆ ಎಂದು ಏನೂ ಬರೆದಿಲ್ಲ. ಆಂದಾಗ ೮೦ ಲಕ್ಷ ರೂಪಾಯಿ ವ್ಯತ್ಯಾಸ ಏತಕ್ಕೆ ಬಂತು? ಒಂದು ಪ್ರಶ್ನೆಗೆ ಒಂದು ಇನ್ನೊಂದು ಪ್ರಶ್ನೆಗೆ ಇನ್ನೊಂದು ಹೇಳುತ್ತಿದ್ದೀರಿ. ಇದು ಏತಕ್ಕೆ ಎಂಬುದನ್ನು ಹೇಳಬೇಕು. ನಾನು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ವರದಿ ಬಗ್ಗೆ ಕೇಳಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ ಕಮಿಟಿಯವರು ಅನೇಕ ರಿಪೋರ್ಟ್‌ಗಳನ್ನು ಕೊಟ್ಟಿದ್ದಾರೆ. ಆ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಅಥವಾ ಅವರ ಸಲಹೆಗಳನ್ನು ತೆಗೆದುಕೊಳ್ಳುವುದಕ್ಕೆ ಕಮಿಟಿ ಮಾಡಿ, ಎಗ್ಸಾಮಿನ್ ಮಾಡಿ ಸಂಬಂಧಪಟ್ಟ ಕೈಗಾರಿಕೆಗಳಿಗೆ ಫಾಲೋ ಮಾಡುವುದಕ್ಕೆ ಇನ್‌ಸ್ಟ್ರಕ್ಷನ್ ಕೊಡುತ್ತೀರಾ ? ಎರಡನೆಯದಾಗಿ ಕೈಗಾರಿಕೆಗಳನ್ನು ಇಂಪ್ರೂವ್ ಮಾಡುವುದಕ್ಕೆ ನಿಮ್ಮ ಮೇಜರ್ ಸ್ಟೆಪ್ಸ್ ಏನು ? ಕೈಗಾರಿಕೆಗಳು ಮುಳುಗಬಾರದು ಮುಖ್ಯವಾಗಿ ಅಂಡರ್‌ಟೇಕಿಂಗ್ಸ್ ಬಗ್ಗೆ ಇರತಕ್ಕ ವಿಶ್ವಾಸ ಜನರಿಂದ ಹೋಗಬಾರದು. ಅಂಡರ್‌ಟೇಕಿಂಗ್ಸ್‌ನ್ನು ಜಾಯಿಂಟ್ ಸೆಕ್ಟಾರ್‌ಗೆ ಪ್ರೈವೇಟ್ ಸೆಕ್ಟಾರ್‌ಗೆ ಮಾರಾಟ ಮಾಡುತ್ತಾರೆ ಎಂಬ ಭಾವನೆ ಜನರಲ್ಲಿ ಬಂದರೆ ಕಷ್ಟವಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ನಾನು ಹೇಳಿದ್ದೇನೆ ಸಾರ್ವಜನಿಕ ವಲಯದಲ್ಲಿ ರೋಗಗ್ರಸ್ತ ಕಾರ್ಖಾನೆಗಳು ಯಾವುವು ಇದೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಅದಕ್ಕೆ ಇರುವ ಕಾರಣವನ್ನು ನೋಡಬೇಕು ತಾಂತ್ರಿಕ ಕಾರಣವೋ ಹಣಕಾಸಿನ ಕಾರಣವೋ ಅಥವಾ ವ್ಯಾಪಾರದ ನೀತಿಯೋ ಯಾವ ಕಾರಣ ಎಂಬುದನ್ನು ಸಮಗ್ರವಾಗಿ ತೆಗೆದುಕೊಳ್ಳಬೇಕು. ಅದಕ್ಕೆ ಯಾರೋ ಒಬ್ಬ ಆಫೀಸರ್ ಅಥವಾ ಬೋರ್ಡ್ ಡೈರೆಕ್ಟರ್ ಕಾರಣ ಎಂದು ಭಾವಿಸಬಾರದು. ಸಾರ್ವಜನಿಕರ ಮನಸ್ಸಿನಲ್ಲಿ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಅಂದರೆ ಯಾರಿಗೂ ಹೊಣೆಯಲ್ಲ ಎಂಬ ಭಾವನೆ ಇದೆ. ಅದನ್ನು ಬದಲಾವಣೆ ಮಾಡಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಪಬ್ಲಿಕ್

ಅಂಡರ್‌ಟೇಕಿಂಗ್ಸ್ ಕಮಿಟಿಯವರು ಯಾವುದನ್ನು ಪಾಯಿಂಟ್ ಔಟ್ ಮಾಡುತ್ತಾರೆ, ಅವ್ಯವಹಾರಕ್ಕೆ ಅಧಿಕಾರಿಗಳು ಕಾರಣ ಎಂದು ಯಾರ ಬಗ್ಗೆ ಹೇಳುತ್ತಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಕಾಪುವಿನಲ್ಲಿರುವ ಕ.ವಿ. ಮಂಡಳಿಯಲ್ಲಿ ಸಾಮಗ್ರಿಗಳು ದೊರೆಯದೆ ಇರುವುದು

೨೧೪೬. ಶ್ರೀ ವಸಂತ ವಿ. ಸಾಲ್ಯಾನ್ (ಕಾಪು).—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳನ್ನು ದಯವಿಟ್ಟು ಉತ್ತರಿಸುವರೇ ?

ಅ) ಕಾಪು ಕ್ಷೇತ್ರದಲ್ಲಿರುವ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಇಲಾಖೆಯ ಸಾಮಗ್ರಿಗಳು ಇಲ್ಲದೆ ಕೆಲಸ ಕಾರ್ಯಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸಾಮಗ್ರಿಗಳನ್ನು ಪೂರೈಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಸಾಮಗ್ರಿಗಳ ಅಭಾವದಿಂದ ಉಡುಪಿ ತಾಲ್ಲೂಕಿನಲ್ಲಿ ಕೆಲಸಗಳು ಸ್ಥಗಿತಗೊಂಡಿಲ್ಲ, ನಿಗಧಿತ ಗುರಿಯನ್ನು ಸಾಧಿಸಿರುವುದಲ್ಲದೇ ಗುರಿಯನ್ನು ಮೀರಿ ಪ್ರಗತಿ ಸಾಧಿಸಲಾಗಿದೆ.

ಆ) ನಿಗಧಿತ ವಾರ್ಷಿಕ ಗುರಿ ಸಾಧಿಸಲು ಸಾಕಷ್ಟು ಸಾಮಗ್ರಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಶ್ರೀ ವಿ ವಸಂತ ಸಾಲಿಯಾನ.—ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಗುರಿ ಸಾಧಿಸಿದ್ದೇವೆ ಎಂದು ಹೇಳಿದ್ದಾರೆ ತಾಲ್ಲೂಕು ಮಿಾಟಿಂಗ್‌ನಲ್ಲಿ ಅಧಿಕಾರಿಗಳು ಗುರಿ ಸಾಧಿಸಲಿಕ್ಕೆ ಸಾಮಾನುಗಳ ಕೊರತೆ ಇದೆ. ಆದ್ದರಿಂದ ಗುರಿ ಸಾಧಿಸಲಿಕ್ಕೆ ಆಗಲಿಲ್ಲ ಎಂದು ಹೇಳಿದ್ದಾರೆ. ಎರಡನೇ ಪ್ರಶ್ನೆ ಏನೆಂದರೆ ಐ.ಆರ್.ಡಿ.ಪಿ. ಮತ್ತು ನೂರು ಬಾವಿಗಳ ಯೋಜನೆ ಮತ್ತು ಕೃಷಿ ಸಾಲಗಳ ಮುಖಾಂತರ ಸಾಲ ಪಡೆದುಕೊಂಡು ರೈತರು ಹಾಕಿಕೊಂಡಿರುವ ಪಂಪ್ ಸೆಟ್‌ಗಳಿಗೆ ವಿದ್ಯುತ್ ಕನೆಕ್ಷನ್ ಮಾಡದೇ ಇರುವ ಪರಿಸ್ಥಿತಿ ಉದ್ಭವವಾಗಿದೆ. ಟ್ರಾನ್ಸ್‌ಫಾರ್ಮರ್ ಕೊರತೆ ಇದೆ, ಕಂಬಗಳು ಮತ್ತು ಇತರೆ ಸಾಮಗ್ರಿಗಳ ಕೊರತೆ ಇದೆ, ಎಂದು ವಿದ್ಯುತ್ ಕನೆಕ್ಷನ್ ಕೊಡದಿರುವುದರಿಂದ ಗ್ರಾಮಾಂತರ ಪ್ರದೇಶದ ಕೃಷಿಕರಿಗೆ ತೊಂದರೆಯಾಗಿದೆ ಆದ್ದರಿಂದ ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ಇಲಾಖೆಗೆ ಕೂಡಲೇ ಬೇಕಾದ ಸಾಮಗ್ರಿಗಳನ್ನು ಕೊಟ್ಟು ಗ್ರಾಮಾಂತರ ಪ್ರದೇಶದ ಜನರಿಗೆ ಆದಷ್ಟು ಜಾಗ್ರತೆ ಪಂಪ್‌ಸೆಟ್ಟಿಗೆ ಕನೆಕ್ಷನ್ ಕೊಡುವಂಥ ರೀತಿಯಲ್ಲಿ ಆದೇಶ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

(ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು)

ಶ್ರೀ ಲಕ್ಷ್ಮೀನರಸಿಂಹಯ್ಯ.—ಸನ್ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಗುರಿಳ ಸಾವಿರ ಸಾಧನೆ ಮಾಡಿರತಕ್ಕದ್ದು ೪೯.೫೪೬. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರಿ ೨೫೬೦ ಸಾಧನೆ ೨೬೪೭. ಉಡುಪಿ ತಾಲ್ಲೂಕಿನಲ್ಲಿ ಸಾಧಿಸಬೇಕಾದ್ದು ೭೫೦ ಈಗ ಕೆಲಸ ಮಾಡಿ ಮುಗಿಸಿರುವುದು ೭೫೭. ಇದನ್ನು ನೋಡಿದರೆ ಏನೂ ಗುರಿ ಹಾಕಿಕೊಂಡಿದ್ದೇವೆ ಅದನ್ನೆಲ್ಲಾ ಸಾಧನೆ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ. ಜೊತೆಗೆ ಉಡುಪಿ ತಾಲ್ಲೂಕಿನಲ್ಲಿ ೆವಿನ್ಯೂ ಗ್ರಾಮಗಳ ವಿದ್ಯುತ್ತೀಕರಣದಲ್ಲಿ ೧೦೦ಕ್ಕೆ ೧೦೦ರಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಬೇಡಿಕೆ, ಗುರಿಗಿಂತ ಒಂದೂವರೆಯಷ್ಟು ಹೆಚ್ಚು ಇದೆ. ೧೯೮೩ನೇ ಇಸವಿಗಿಂತ ಮುಂಚೆ ೧೯ ಸಾವಿರಕ್ಕಿಂತ ಹೆಚ್ಚಿನ ಗುರಿ ಇರಲಿಲ್ಲ, ಅಂಥದ್ದರಲ್ಲಿ ೪೦ ಸಾವಿರ ನಿಗದಿ ಮಾಡಿ ಗುರಿ ಮೀರಿ ಸಾಧನೆ ಮಾಡುತ್ತಿದ್ದೇವೆ ಉತ್ಪಾದನೆ ೩/೨ ಭಾಗ ಆಗುತ್ತಿದೆ. ಮೊದಲು ಮೂರನೆಯ ಒಂದು ಭಾಗ ಉತ್ಪಾದನೆ ಆಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ಗುರಿಯನ್ನು ಸಾಧನೆ ಮಾಡಿದ್ದೇವೆ. ಈ ಸಾಲವನ್ನು ಪಡೆದಂತ ವ್ಯಕ್ತಿಗಳಿಗೆ ಅದ್ಭತೆಯ ಮೇರೆಗೆ ವಿದ್ಯುತ್ತನ್ನು ಒದಗಿಸುತ್ತಿದ್ದೇವೆ ಪಿ.ಎಲ್.ಡಿ. ಮುಂತಾದ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಂಡವರಿಗೆ ಅದ್ಭತೆ ಮೇಲೆ ನೀಡಿದ್ದೇವೆ. ಆದರೆ ಯಾವ ಯೋಚನೆಯನ್ನು ಮಾಡದೆ ಕೆಲವು ಕಡೆಗಳಲ್ಲಿ ಬ್ಯಾಂಕ್‌ಗಳಲ್ಲಿ ಸಾಲ ತೆಗೆದುಕೊಂಡಾಗ ಇಂತಹ ಸಮಸ್ಯೆಗಳು ಉದ್ಭವವಾಗುತ್ತದೆ ಏನೆ ಆಗಲಿ ಆ ಜಾಗದಲ್ಲಿ ಉಳಿದಿರತಕ್ಕ ಪಂಪ್ ಸೆಟ್ಟುಗಳಿಗೆ ಆದಷ್ಟು ಬೇಗ ವಿದ್ಯುತ್ತನ್ನು ಸರಾಜು ಮಾಡುವ ವ್ಯವಸ್ಥೆ ಮಾಡುತ್ತೇವೆ.